ದಿಃ 07-07-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿಗಳ ಪರ ವಕೀಲರಿಂದ ಶ್ರೀ.ಬಿ.ಡಿ.ಪಿ.ವಕೀಲರಿಂದಃ**

ನಿಪಿ-11ರ ಕ್ರಯ ಪತ್ರವನ್ನು ಓದಿ ತಿಳಿದುಕೊಂಡಿದ್ದೇನೆ. ಸದರಿ ಕ್ರಯ ಪತ್ರವನ್ನು ಸರ್ವೆ ನಂಬರ 62 ಮತ್ತು 141 ರ ಬಗ್ಗೆ ಬರೆಯಲಾಗಿರುತ್ತದೆ. ನಿಪಿ-11 ದಿನಾಂಕ 22/05/2006 ರ ಸದರಿ ಕ್ರಯ ಪತ್ರ ಯಾರು ಇದುವರೆಗೂ ದಾವೆಯನ್ನು ಸಲ್ಲಿಸಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ. ನಿಪಿ-11 ಸರ್ವೆ ನಂಬರ 88/1ಎ ಮತ್ತು 88/1ಬಿ ಆಸ್ತಿಗಳಿಗೆ ಸಂಬಂದಿಸಿದ್ದು ಸರ್ವೆ ನಂಬರ 62 ಮತ್ತು 141 ಕ್ಕೆ ಸಂಬಂಧಿಸಿದ್ದು ಅಲ್ಲ ಎಂದರೆ ನನಗೆ ಮಾಹಿತಿ ಇಲ್ಲ. ಸರ್ವೆ ನಂಬರ 88/1ಎ ಮತ್ತು 88/1ಬಿ ಆಸ್ತಿಗಳಿಗೆ ಈ ದಾವೆಯಲ್ಲಿ ಸೇರಿಲ್ಲ ಎಂದರೆ ಹೌದು. ಸದರಿ ಆಸ್ತಿಗಳು ಈ ಹಿಂದಿನ ಓಸ ಎಸ ನಂಬರ 222/2013 ರ ದಾವೆಯಲ್ಲಿಯೂ ಸಹ ಸೇರಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ. ನಿಪಿ -11 ರ ಕ್ರಯ ಪತ್ರವು ಈ ದಾವೆಗೂ ಸಂಬಂಧ ಇಲ್ಲದೇ ಇದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಹಾಜರು ಮಾಡಿದ್ದೇನೆ ಎಂದರೆ ಸುಳ್ಳು.

2ನೇ ಪ್ರತಿವಾದಿ ನನ್ನ ವಿರುದ್ದ ಚಿಕ್ಕೋಡಿ ಪೋಲಿಸರ ಠಾಣೆಯಲ್ಲಿ ಪ್ರಕರಣ ನಂಬರ 40/2020 ರಂತೆ ದಾಖಲಿಸಿದ್ದಾರೆ ಎಂದರೆ ಹೌದು. ಸಾಕ್ಷಿ ಮುಂದುವರೆದು ಸುಳ್ಳು ದೂರು ದಾಖಲಿಸಿದ್ದಾರೆ ಎಂದು ನುಡಿಯುತ್ತಾರೆ. ಸದರಿ ದೂರನ್ನು ನಾನು ಕಡಲೆ ಬೆಳೆಯನ್ನು ಕಳುವು ಮಾಡಲು ಪ್ರಯತ್ನಿಸಿದ್ದ ಕಾರಣ ನನ್ನ ವಿರುದ್ದ ದೂರು ದಾಖಲಿಸಿರುತ್ತಾರೆ ಎಂದರೆ ಸಾಕ್ಷಿಯೂ ಸುಳ್ಳು ದೂರು ಸಲ್ಲಿಸಿದ್ದಾರೆ ಎಂದು

ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ಪೋಲಿಸರು ಅಂತಿಮ ವರದಿ ಸಲ್ಲಿಸಿದ್ದು ಪ್ರಕರಣ ಚಾಲ್ತಿಯಲ್ಲಿದೆ ಎಂದರೆ ಹೌದು. ನಾನು ಹಾಜರು ಮಾಡಿದ ಪೋಟೋಗಳು ಪೋಲಿಸರು ಮೇಲೆ ಹೇಳಿದ ದೂರಿನ ಮೇರೆಗೆ ಪೋಲಿಸರು ಸ್ಥಳಕ್ಕೆ ಬಂದಾಗ ತೆಗೆದ ಪೋಟೋಗಳು ಎಂದರೆ ಸುಳ್ಳು. ನಾನು ಪೋಲಿಸರನ್ನು ಸ್ಥಳಕ್ಕೆ ಕರಿಸಿದಾಗ ತೆಗೆಸಿದ ಪೋಟೋಗಳು ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಗಂಡ ಮತ್ತು ಅವ ಕುಟುಂಬಂದವರ ನಡುವೆ ಓ.ಎಸ. ನಂಬರ 222/2013 ರ ದಾವೆಯಲ್ಲಿ ರಾಜೀ ಆಗಿರುತ್ತದೆ ಎಂದರೆ ಸಾಕ್ಷಿ ಮೋಸ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ರಾಜೀ ಡಿಕ್ರಿಯನ್ನು ಮೋಸದಿಂದ ಪಡೆದಿರುತ್ತಾರೆ ಎಂದು ಸದರಿ ದಾವೆಯ ಪಕ್ಷಗಾರರು ಇವರೆಗೂ ಪ್ರಶ್ನೆ ಮಾಡಿಲ್ಲ ಎಂದರೆ ಅದರ ಬಗ್ಗೆ ನಮಗೆ ಮಾಹಿತಿ ಇಲ್ಲ. ಸದರಿ ರಾಜೀ ಡಿಕ್ರಿಯ ಮೂಲಕ ನನ್ನ ಗಂಡನಿಗೆ ಬಂದ ಹಿಸ್ಸೆಯ ಆಸ್ತಿಗಳು ಈಗಲೂ ಸಹ ನನ್ನ ಬಳಿ ಇವೆ ಎಂದರೆ ಸಾಕ್ಷಿಯೂ ನಮಗೆ ತಿಳಿಯದೇ ಸಹಿ ಪಡೆದಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಗಂಡನ ಹಿಸ್ಸೆಗೆ ರಾಜೀ ಮೂಲಕ ಬಂದ ಆಸ್ತಿಗಳಿಗೆ ಮಾತ್ರ ನಾವು ಹಕ್ಕುದಾರರು ಆಗಿದ್ದರೂ ಸಹ ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ.ಹೇ. ಕೇ. ಸ. ಇದೆ.

ಪ್ರ.ಹಿ.ದಿ.ನ್ಯಾಯಾಧೀಶರು, ಚಿಕ್ಕೋಡಿ